# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 381

2) ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸಬೇಕಾದ ದಿನಾಂಕ : 13-08-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮೀನುಗಾರಿಕೆಯಿಂದ ಜೀವನ ನಡೆಸುವ ಎಷ್ಟು ಕುಟುಂಬಗಳಿವೆ; (ತಾಲ್ಲೂಕುವಾರು ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 33077 ಮತ್ತು ಉಡುಪಿ ಜಿಲ್ಲೆಯಲ್ಲಿ ಒಟ್ಟು 43191 ಕುಟುಂಬಗಳು ಮೀನುಗಾರಿಕೆಯಿಂದ ಜೀವನ ನಡೆಸುತ್ತಿರುತ್ತಾರೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಗೆ ಕಳೆದ 2 ವರ್ಷಗಳಲ್ಲಿ ಮತ್ತು ಪ್ರಸ್ತುತ ವರ್ಷದಲ್ಲಿ ಎಷ್ಟು ಅನುದಾನ ಮೀಸಲಿಡಲಾಗಿದೆ; ಯಾವ ಯಾವ ಕಾರ್ಯಗಳಿಗೆ ಅನುದಾನವನ್ನು ಮೀಸಲಿಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಇ) | ಮೀನುಗಾರರಿಗೆ ಇಲಾಖೆ ವತಿಯಿಂದ ಲೈಫ್‌ಜಾಕೆಟ್‌ಗಳನ್ನು ನೀಡಲಾಗುತ್ತಿದೆಯೇ; ಈ ವರ್ಷದಲ್ಲಿ ಮೀನುಗಾರರಿಗೆ ಲೈಫ್‌ಜಾಕೆಟ್‌ಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; | ಹೌದು.<br>2025-26 ನೇ ಸಾಲಿನಲ್ಲಿ ಮೀನುಗಾರರಿಗೆ ಲೈಫ್ ಜಾಕೆಟ್‌ಗಳನ್ನು ಖರೀದಿಸಿ ಉಚಿತವಾಗಿ ನೀಡಲು ರೂ.15.00 ಲಕ್ಷಗಳ ಅನುದಾನ ಮೀಸಲಿಡಲಾಗಿದೆ. |
| ಈ) | ಮೀನುಗಾರರಿಗೆ ನೀಡುವ ಸೌಲಭ್ಯಗಳನ್ನು ಹೆಚ್ಚಿಸಲು ಕಳೆದ 2 ವರ್ಷಗಳಲ್ಲಿ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ? (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು ) | ಮೀನುಗಾರರಿಗೆ ನೀಡುವ ಸೌಲಭ್ಯಗಳನ್ನು ಹೆಚ್ಚಿಸಲು ಕಳೆದ 2 ವರ್ಷಗಳಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. |

ಸಂಖ್ಯೆ: ಪಸಂಮೀ ಇ-125 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 381 ಕ್ಕೆ**

**ಅನುಬಂಧ-1**

| ದಕ್ಷಿಣ ಕನ್ನಡ ಜಿಲ್ಲೆ | | | ಉಡುಪಿ ಜಿಲ್ಲೆ | |
|---|---|---|---|---|
| **ಕ್ರ.ಸಂ** | **ತಾಲ್ಲೂಕು** | **ಮೀನುಗಾರರ ಕುಟುಂಬಗಳ ಸಂಖ್ಯೆ** | **ತಾಲ್ಲೂಕು** | **ಮೀನುಗಾರರ ಕುಟುಂಬಗಳ ಸಂಖ್ಯೆ** |
| 1 | ಬಂಟ್ವಾಳ | 219 | ಬ್ರಹ್ಮಾವರ | 8446 |
| 2 | ಬೆಳ್ತಂಗಡಿ | 173 | ಬೈಂದೂರು | 8102 |
| 3 | ಕಡಬ | 86 | ಹೆಬ್ರಿ | 200 |
| 4 | ಮಂಗಳೂರು | 28,034 | ಕಾಪು | 9422 |
| 5 | ಮೂಡಬಿದ್ರೆ | 199 | ಕಾರ್ಕಳ | 496 |
| 6 | ಮುಲ್ಕಿ | 1092 | ಕುಂದಾಪುರ | 3495 |
| 7 | ಪುತ್ತೂರು | 139 | ಉಡುಪಿ | 13030 |
| 8 | ಸುಳ್ಯ | 159 | ಒಟ್ಟು | **43191** |
| 9 | ಉಳ್ಳಾಲ | 2976 | | |
| ಒಟ್ಟು | | **33077** | | |

ಮೀನುಗಾರಿಕೆ ನಿರ್ದೇಶಕರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 381 ಕ್ಕೆ**

**ಅನುಬಂಧ-2**

ರೂ.ಲಕ್ಷಗಳಲ್ಲಿ

| | ಜಿಲ್ಲೆ | ಉಡುಪಿ | | | ದಕ್ಷಿಣ ಕನ್ನಡ ಜಿಲ್ಲೆ | | |
|---|---|---|---|---|---|---|---|
| | ವರ್ಷ | 2023-24 ವೆಚ್ಚ | 2024-25 ವೆಚ್ಚ | 2025-26 ಅನುದಾನ | 2023-24 ವೆಚ್ಚ | 2024-25 ವೆಚ್ಚ | 2025-26 ಅನುದಾನ |
| | **ರಾಜ್ಯ ವಲಯ ಯೋಜನೆಗಳು** | | | | | | |
| 1 | ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ | 277.69 | 268.78 | 0.00 | 2753.92 | 947.20 | |
| 2 | ಯಾಂತ್ರೀಕೃತ ಬೋಟ್ ಗಳಿಗೆ ಡೀಸಿಲ್ ವಿತರಣೆ | 97652 KL | 91954 KL | 0.00 | 69650 KL | 67680 KL | |
| 3 | ನಾಡದೋಣಿ ಸೀಮೆ ಎಣ್ಣೆ ವಿತರಣೆ | 5510KL | 766.74KL | 0.00 | 1547.8 KL | 2498.20 KL | |
| 4 | ಸಿಗಡಿ ಮತ್ತು ಹಿನ್ನೀರು ಮೀನುಕೃಷಿಗೆ ಪ್ರೋತ್ಸಾಹ | 5.58 | 0.00 | 5.00 | | | |
| 5 | ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಉಚಿತವಾಗಿ ಸರಬರಾಜು | 4.98 | 5.00 | 5.00 | 5.00 | 5.00 | 4.00 |
| 6 | ಅಳಿವೆಯಲ್ಲಿ ವಿವಿಧ ತಳಿಗಳ ಮೀನುಮರಿಗಳನ್ನು ದಾಸ್ತಾನು ಮಾಡುವುದು | 15.00 | 15.00 | 15.00 | 15.00 | 15.00 | 10.00 |
| 7 | ಎಫ್.ಆರ್.ಪಿ ಪಾತಿ ದೋಣಿ ಮತ್ತು ಜೀವ ರಕ್ಷಕ ಸಾಧನಗಳನ್ನು ಉಚಿತವಾಗಿ ವಿತರಿಸುವುದು | 0.00 | 5.20 | 0.00 | | | |
| 8 | ಮತ್ಸ್ಯಾಶ್ರಯ<br>ಭಾಗ-1(2022-23)<br>ಭಾಗ-2(2022-23) | 289.46<br>135.91 | | | 243.43<br>342.95 | 266.40 | |
| 9 | ಮೀನುಗಾರರ ಸಂಕಷ್ಟ ಪರಿಹಾರ ನಿಧಿ | 24.00 | 75.50 | 32.00 | 50.66 | 35.45 | 30.00 |
| 10 | ಮಂಜುಗಡ್ಡೆ ಘಟಕಗಳು ಮತ್ತು ಶೈತ್ಯಾಗಾರಗಳು ಬಳಸಿದ ವಿದ್ಯುತ್ ಮೇಲಿನ ಸಹಾಯಧನ* | 219.22 | 392.14 | 102.86 | 79.66 | 191.32 | 153.06 |
| 11 | ಉಳಿತಾಯ ಮತ್ತು ಪರಿಹಾರ ಯೋಜನೆ (ಕೇ.ಪು.ಯೋ) | 214.98 | 493.00 | 372.42 | 23.70 | 57.33 | 36.09 |
| 12 | ಮತ್ಸ್ಯ ಆಶಾ ಕಿರಣ-ಉಳಿತಾಯ ಪರಿಹಾರ ಯೋಜನೆ | | | 186.21 | | | 18.05 |
| 13 | ವಾಣಿಜ್ಯ ಬ್ಯಾಂಕ್ ಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು | 0.86 | 0.00 | 0.00 | | | |
| 14 | ಶೂನ್ಯ ಬಡ್ಡಿ ಯೋಜನೆ | 16.14 | 48.90 | 0.00 | | | |
| | **ಜಿಲ್ಲಾ ವಲಯ ಯೋಜನೆಗಳು** | | | | | | |
| 1 | ಮೀನುಗಾರಿಕೆ ಕಟ್ಟಡಗಳ ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ | 6.80 | 6.23 | 7.00 | 9.99 | 7.50 | 10.00 |
| 2 | ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆ | 25.96 | 23.11 | 26.80 | 7.98 | 9.28 | 8.28 |
| 3 | ಮೀನುಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ ಯೋಜನೆ | 11.92 | 11.92 | 0.00 | 3.00 | 3.00 | 3.00 |
| 4 | ಪ್ರದರ್ಶನಗಳು ಮತ್ತು ತರಬೇತಿ | 2.00 | 2.07 | 0.00 | 3.00 | 3.12 | 3.12 |

ಮೀನುಗಾರಿಕೆ ನಿರ್ದೇಶಕರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 381 ಕ್ಕೆ**

**ಅನುಬಂಧ -3**

ಮೀನುಗಾರರಿಗೆ ನೀಡುವ ಸೌಲಭ್ಯಗಳನ್ನು ಹೆಚ್ಚಿಸಲು ಕಳೆದ 2 ವರ್ಷಗಳಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿವೆ.

1. **ಉಳಿತಾಯ ಹಾಗೂ ಪರಿಹಾರ ಯೋಜನೆ:**

ಈ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ದ ಪಾಲು ರೂ.1500/- ಮತ್ತು ರಾಜ್ಯ ಸರ್ಕಾರದ ಪಾಲು ರೂ.1500/- ಹಾಗೂ ಫಲಾನುಭವಿಯ ಪಾಲು ರೂ. 1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ನೀಡಲಾಗುತ್ತಿತ್ತು.

2024-25 ನೇ ಸಾಲಿನಿಂದ "ಮತ್ಸ್ಯ ಆಶಾಕಿರಣ ಯೋಜನೆಯಡಿ ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಕರಾವಳಿಯ ಮೀನುಗಾರರಿಗೆ ನೀಡುತ್ತಿರುವ ಪರಿಹಾರ ಮೊತ್ತದ ರಾಜ್ಯದ ಪಾಲನ್ನು 1,500 ರೂ. ಗಳಿಂದ 3,000 ರೂ.ಗಳಿಗೆ ಹೆಚ್ಚಿಸಲಾಗಿರುತ್ತದೆ. ಅದರಂತೆ, ಪ್ರಸ್ತುತ, ರಾಜ್ಯ ಸರ್ಕಾರದ ಪಾಲು ರೂ.300/-, ಕೇಂದ್ರ ಸರ್ಕಾರದ ಪಾಲು ರೂ.1500/- ಹಾಗೂ ಫಲಾನುಭವಿಯ ಪಾಲು ರೂ. 1500/- ಸೇರಿಸಿ ಹೀಗೆ ಒಟ್ಟು ರೂ.6000/- ಗಳನ್ನು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ನೀಡಲಾಗುತ್ತಿದೆ.

2. **ಮೀನುಗಾರರಿಗೆ ನೀಡುವ ಸಾಲದ ವ್ಯತ್ಯಾಸದ ಬಡ್ಡಿಯನ್ನು ಬ್ಯಾಂಕ್ ಗಳಿಗೆ ಸರ್ಕಾರದಿಂದ ತುಂಬಿಕೊಡುವ ಯೋಜನೆ:**

2009-10 ನೇ ಸಾಲಿನಲ್ಲಿ ಮೀನುಗಾರರಿಗೆ 3% ಬಡ್ಡಿದರದಲ್ಲಿ ರೂ. 50,000/- ದವರೆಗೆ ಬ್ಯಾಂಕುಗಳಿಂದ ಸಾಲ ನೀಡುವ ಯೋಜನೆಯಡಿ, ಮಹಿಳಾ ಮೀನುಗಾರರನ್ನೊಳಗೊಂಡಂತೆ ಎಲ್ಲಾ ಮೀನುಗಾರರಿಗೆ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ರೂ. 50,000/- ದ ವರೆಗೆ 3% ಬಡ್ಡಿದರದಲ್ಲಿ ಬ್ಯಾಂಕುಗಳಿಂದ ಸಾಲವನ್ನು ನೀಡಲಾಗುತ್ತಿತ್ತು. ವ್ಯತ್ಯಾಸದ ಬಡ್ಡಿಯ ಮೊತ್ತವನ್ನು ಇಲಾಖೆ ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿತ್ತು.

ಸದರಿ ಯೋಜನೆಯನ್ನು ಮಾರ್ಪಡಿಸಿ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ ರೂ. 50,000/- ಗಳ ವರೆಗೆ ಶೇ. 2 ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಸಾಲವನ್ನು ನೀಡಲಾಗುತ್ತಿತ್ತು. 2018-19 ನೇ ಸಾಲಿನಿಂದ ಸದರಿ ಯೋಜನೆಯಡಿ, **ಶೂನ್ಯ ಬಡ್ಡಿ** ದರ ದಲ್ಲಿ ಮಹಿಳಾ ಮೀನುಗಾರರಿಗೆ ರೂ.50,000/- ವರೆಗೆ ಸಾಲ ನೀಡಲಾಗುತ್ತಿದೆ. 2023-24 ನೇ ಸಾಲಿನಿಂದ ಸದರಿ ಯೋಜನೆಯಡಿ ಮಹಿಳಾ ಮೀನುಗಾರರಿಗೆ **ಶೂನ್ಯ ಬಡ್ಡಿ** ದರ ನೀಡಲಾಗುತ್ತಿದ್ದ ಸಾಲದ ಮಿತಿಯನ್ನು ರೂ. 50,000/- ಗಳಿಂದ ರೂ. 3,00,000/- ಗಳವರೆಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

3. ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು ಯೋಜನೆ :

- ಮೀನುಗಾರಿಕೆಯಲ್ಲಿ ತೊಡಗಿರುವಾಗ **ಮರಣಹೊಂದಿದ ಪ್ರಕರಣಗಳಿಗೆ** ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಈ ಹಿಂದೆ ನೀಡಲಾಗುತ್ತಿದ್ದ ರೂ.6.00 ಲಕ್ಷ ಪರಿಹಾರವನ್ನು ರೂ.10.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.
- ಮೀನುಗಾರಿಕೆ ದೋಣಿ ಹಾನಿಗೆ ರೂ.10.00 ಲಕ್ಷಗಳ ವರೆಗೆ ಪರಿಹಾರ ನೀಡಲಾಗುತ್ತದೆ.
- ಮೀನುಗಾರಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ಮೀನುಗಾರರು **ಶಾಶ್ವತ ಅಂಗವಿಕಲರಾದಲ್ಲಿ**, ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಈ ಹಿಂದೆ ನೀಡಲಾಗುತ್ತಿದ್ದ ರೂ.3.00 ಲಕ್ಷ ಪರಿಹಾರವನ್ನು ರೂ.4.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಹಾಗೂ **ಭಾಗಶ: ಅಂಗವಿಕಲರಾದಲ್ಲಿ** ಈ ಹಿಂದೆ ನೀಡಲಾಗುತ್ತಿದ್ದ ರೂ.1.5 ಲಕ್ಷ ಪರಿಹಾರವನ್ನು ರೂ. 2 ಲಕ್ಷಗಳಿಗೆ ಹೆಚ್ಚಿಸಲಾಗಿದೆ.
- ಮೀನುಗಾರಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ **ವೈದ್ಯಕೀಯ ಶುಶ್ರೂಷೆಗಾಗಿ** ಮಾಡಿದ ವೆಚ್ಚಕ್ಕೆ ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಈ ಹಿಂದೆ ನೀಡಲಾಗುತ್ತಿದ್ದ ಗರಿಷ್ಟ ರೂ.1.00 ಲಕ್ಷ ಪರಿಹಾರವನ್ನು ಗರಿಷ್ಟ ರೂ.3.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

4. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಕರರಹಿತ ಡೀಸೆಲ್ ವಿತರಣೆ ಯೋಜನೆ:

ಕರರಹಿತ ಡೀಸಲ್‌ನ ವಾರ್ಷಿಕ ಮಿತಿಯನ್ನು 1.50 ಲಕ್ಷ ಕಿಲೋ ಲೀಟರ್‌ನಿಂದ 2.0 ಲಕ್ಷ ಕಿಲೋಲೀಟರ್‌ಗೆ ಹೆಚ್ಚಿಸಿ ಯಾಂತ್ರೀಕೃತ ದೋಣಿಗಳ ಮಾಲೀಕರ ಬಹುವರ್ಷಗಳ ಬೇಡಿಕೆಯನ್ನು ಈಡೇರಿಸಲಾಗಿದೆ.

5. ಮೋಟರೀಕೃತ ಮೀನುಗಾರಿಕೆ ದೋಣಿಗಳಿಗೆ ಸೀಮೆಎಣ್ಣೆ ವಿತರಣೆ ಯೋಜನೆ:

ಈ ಮೊದಲು ನಾಡದೋಣಿ ಮಾಲೀಕರು ಕೇಂದ್ರ ಸರ್ಕಾರದಿಂದ ವಿತರಿಸಲಾಗುತ್ತಿದ್ದ ಪಡಿತರ ಸೀಮೆಎಣ್ಣೆ ಮೇಲೆ ಅವಲಂಬಿತರಾಗಿದ್ದರು ಹಾಗೂ ಕೇಂದ್ರ ಸರ್ಕಾರದಿಂದ ಅಗತ್ಯಕ್ಕೆ ಅನುಗುಣವಾಗಿ ಸೀಮೆಎಣ್ಣೆ ಬಿಡುಗಡೆಯಾಗುತ್ತಿರಲಿಲ್ಲ. ಹೀಗಾಗಿ ನಾಡದೋಣಿ ಮೀನುಗಾರರು ಪ್ರತಿವರ್ಷ ಸಮಸ್ಯೆ ಎದುರಿಸುತ್ತಿದ್ದು ಪ್ರತಿಭಟನೆ ಮತ್ತು ರಸ್ತೆ ತಡೆ ಚಳುವಳಿಗಳನ್ನುಮಾಡುತ್ತಿದ್ದರು. 2023-24 ನೇ ಸಾಲಿನಿಂದ ನಾಡದೋಣಿ ಮೀನುಗಾರರಿಗೆ ಕೈಗಾರಿಕಾ ಸೀಮೆ ಎಣ್ಣೆಗೆ ಪ್ರತಿ ಲೀಟರ್ ಗೆ 35 ರೂಗಳ ರಿಯಾಯಿತಿ ದರದಲ್ಲಿ ನಿರಂತರವಾಗಿ ಪೂರೈಸಲು ಕ್ರಮವಹಿಸಲಾಗಿದ್ದು, ಸದರಿ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರು